JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಸುರಗಿ ಆತ್ಮ ಕಥನ : ಸುತ್ತ–ಮುತ್ತ

**ಡಾ. ಪಿ. ನಂಜುಂಡ**

**'ಸುರಗಿ' ಈ ಕೃತಿಯ ಶೀರ್ಷಿಕೆ ನನ್ನ ಬಾಲ್ಯವನ್ನು ನೆನಪು ಮಾಡುವ ಈ ಮಲೆನಾಡಿನ ಹೂವು ಒಣಗಿದಷ್ಟು ತನ್ನ ಪರಿಮಳವನ್ನು ಹೆಚ್ಚಿಸಿಕೊಳ್ಳುತ್ತದೆ. ಆರೋಗ್ಯ ಹದಗೆಡುತ್ತಿರುವ ನನ್ನ ಈ ವಯಸ್ಸಿನಲ್ಲಿ ಸುರಗಿಯಂತೆ ಇರಬೇಕೆಂಬುದು ನನ್ನ ಆಶಯ– ಡಾ. ಯು. ಆರ್. ಅನಂತಮೂರ್ತಿ**

ಹಿಂದಿನ–ಇಂದಿನ ಜಾಗತಿಕ ಸಾಹಿತ್ಯದಲ್ಲಿ ಆತ್ಮಕಥೆ ಹಾಗೂ ಆತ್ಮ ಚರಿತ್ರೆಗಳು ತನ್ನದೇ ಸ್ಥಾನ ಮಾನಗಳನ್ನು ಪಡೆದಿದೆ. ತಮ್ಮ ಬದುಕಿದ ಜೀವಿತಾವಾಧಿಯಲ್ಲಿ ನಡೆದ ಘಟನೆಗಳನ್ನು ಸಿಂಹಾವಲೋಕನ ಕ್ರಮದಿಂದ ನೋಡುವ ದೃಷ್ಟಿಕೋನ ಹಲವು ಆತ್ಮಕಥೆ ಮತ್ತು ಆತ್ಮಚರಿತ್ರೆಗಳಿಗೆ ಇದೆ.

ಇತ್ತೀಚಿಗೆ ಭಾರತೀಯ ಸಾಹಿತ್ಯ ಅದರಲ್ಲೂ ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆ ಪ್ರಕಾರ ಹೆಚ್ಚು ಜನಪ್ರಿಯವಾಗುತ್ತಿದೆ. ಕಾರಣ ಓದುಗನಿಗೆ ಅಥವಾ ಸಹೃದಯನಿಗೆ ತನ್ನ ಇಷ್ಟವಾದ ಲೇಖಕ – ಲೇಖಕಿಯರ ವ್ಯಯುಕ್ತಿಕ ಬದುಕಿನ ದಟ್ಟವಿವರಗಳನ್ನು ತಿಳಿದುಕೊಳ್ಳುವ ಕುತೂಹಲ ಹಾಗೂ ಆಸಕ್ತಿ. ಅರ್ಥಶಾಸ್ತ್ರದ ವ್ಯಾಖ್ಯಾನದಂತೆ ಬೇಡಿಕೆ ಮತ್ತು ಪೂರೈಕೆಗಳು ಒಂದಕ್ಕೊಂದು ಅವಲಂಬಿಸಿವೆ ಎನ್ನುವ ಮಾರುಕಟ್ಟೆಯ ಪರಿಭಾಷೆಯಲ್ಲಿ ಅರ್ಥೈಸುವಂತೆ, ಸಾಂಸ್ಕೃತಿಕವಾದ ವಲಯದಲ್ಲಿಯೂ ಸಹ ಲೇಖಕ– ಲೇಖಕಿ ತನ್ನ ಬದುಕನ್ನು ಮತ್ತು ಬರಹವನ್ನು ಹಿಮ್ಮುಖವಾಗಿ ನೋಡುವ ಪರಿಪಾಠಗಳು ಹೆಚ್ಚಾಗಿ ನಡೆಯುತ್ತಿವೆ ಹಾಗೆಯೇ ಆತ್ಮಕಥನಗಳ ಜಾತ್ರೆ ಆರಂಭವಾಗಿದೆ ಎಂದೆನಿಸುತ್ತಿದೆ?

ಇಲ್ಲಿಯವರೆಗೂ ಜಾಗತಿಕ ಸಾಹಿತ್ಯದಲ್ಲಿ ಪರಿಪೂರ್ಣವಾದ ಆತ್ಮಕಥೆ ಮತ್ತು ಆತ್ಮ ಚರಿತ್ರೆಗಳು ಬಂದಿಲ್ಲ ಎನ್ನುವುದನ್ನು ಸಾಹಿತ್ಯದ ಸೂಕ್ಷ್ಮ ವಿದ್ಯಾರ್ಥಿಗಳು ಎಲ್ಲರೂ ಒಪ್ಪುತ್ತಾರೆ. ಉದಾ : ಗಾಂಧೀಜಿ ಅವರ 'ನನ್ನ ಸತ್ಯಾನ್ವೇಷಣೆ' ಯಾಗಲಿ, ಹಿಟ್ಲರ್‌ನ 'ನನ್ನ ಹೋರಾಟ' ವಾಗಲಿ ಪಿ. ಲಂಕೇಶ್‌ರ 'ಹುಳಿಮಾವಿನ ಮರ' ಆಗಲಿ ಎಲ್ಲವನ್ನು ಸಮಗ್ರವಾಗಿ ಬಿಚ್ಚಿಡುವ ಪ್ರಯತ್ನದಲ್ಲಿ ಸಫಲವಾಗಿಲ್ಲ ಎಂದು ಹೇಳುವ ಹೊತ್ತಿನಲ್ಲಿಯೇ ಮಹಿಳೆಯರ ಆತ್ಮ ಕಥನಗಳು ನಿಷ್ಠುರವಾಗಿ ಸಮಾಜವನ್ನು ನೋಡುವ ಪರಿಪಾಟವನ್ನು ಇತ್ತೀಚೆಗೆ ಮುಂದುವರೆಸಿಕೊಂಡು ಬರುತ್ತಿರುವುದನ್ನು ಗಮನಿಸಬಹುದು. ಡಾ.ಸಾ.ರಾ.ಅಬುಬಕ್ಕರ್ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಡಾ. ವಿಜಯಾ ಅವರ 'ಕುದಿಎಸರು' ಶ್ರೀಮತಿ ಉಮಾಶ್ರೀ ಅವರ 'ಬೆಂಕಿ ಬೆಡಗು'

ರವಿಬೆಳಗೆರೆ ಅವರ ಅನುವಾದಿತ ಆತ್ಮ ಚರಿತ್ರೆ ಕಲಾವಿದೆ ಶ್ರೀಮತಿ ಪ್ರೊತಿಮಾಬೇಡಿ ಅವರ 'ಟೈಂಪಾಸ್' ಎನ್ನುವ ಕೃತಿಗಳನ್ನು ಗಮನಿಸುವಾಗ ಹಾಗೆಯೇ ಕವಯತ್ರಿ ಪ್ರತಿಭಾನಂದಕುಮಾರ್ ಅವರ 'ಅನುದಿನದ ಅಂತರಗಂಗೆ' ಆತ್ಮ ಕಥೆಯ ಸೂಕ್ಷ್ಮತೆಗಳನ್ನು ಗಮನಿಸಬಹುದು.

ಹಿಂದಿನಿಂದಲೂ ಸಮಾಜದ ಅಂಚಿಗೆ ಸರಿಸಿರುವ ತೃತೀಯ ಲಿಂಗಿಗಳು ನಿರೂಪಿಸಿರುವ ಅಕ್ಕಯ್‌ಪದ್ಮಶಾಲಿನಿ ಅವರ 'ಅಕ್ಕಯ್' ಎ. ರೇವತಿ ಬದುಕು–ಬಯಲು ಕೃತಿಗಳನ್ನು ಪರಿಶೀಲಿಸಬಹುದಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆತ್ಮಕಥೆ ಆತ್ಮಚರಿತ್ರೆಗಳಿಗೆ ಪ್ರತ್ಯೇಕವಾದ ಸ್ಥಾನಮಾನವಿದೆ. ಪಂಪನ ಪೂರ್ವದಿಂದ ಹಿಡಿದು, 21ನೇ ಶತಮಾನದ ಜಾಗತೀಕರಣದ ಬಿರುಗಾಳಿಯ ಮಧ್ಯೆಯಲ್ಲಿಯೂ ವ್ಯಕ್ತಿಯ ವ್ಯಕ್ತಿಗತವಾದ ವಿವರಗಳು, ಸಾಧನೆಗಳು. ಅವರ ಪಠ್ಯದಲ್ಲಿಯೇ ಅಂತರ್‌ಗತವಾಗಿರುವುದನ್ನು ಗಮನಿಸಬಹುದು. ಆತ್ಮಕಥೆ, ಆತ್ಮ ಚರಿತ್ರೆಯ ಎಳೆಗಳು ಅವನ ಅಥವಾ ಅವಳ ಸೃಜನಶೀಲ ಪಠ್ಯದಲ್ಲಿಯೇ ಬೆರೆತು ಹೋಗಿರುವುದನ್ನು ಸೂಕ್ಷ್ಮವಾಗಿ ಸಾಹಿತ್ಯದ ವಿದ್ಯಾರ್ಥಿಗಳು ಪರಿಶೀಲಿಸಬಹುದು.

ನವೋದಯ, ಪ್ರಗತಿಶೀಲ, ನವ್ಯ, ದಲಿತ– ಬಂಡಾಯ–ಸ್ತ್ರೀವಾದಿ ಚಿಂತನೆ ಮತ್ತು ಸಾಂಸ್ಕೃತಿಕ ಅಧ್ಯಯನದ ಚಿಂತಕಿ – ಚಿಂತಕರು ಅಯಾ ಕಾಲಘಟ್ಟದಲ್ಲಿ ಆತ್ಮಕಥೆ ಅಥವಾ ಆತ್ಮ ಚರಿತ್ರೆಗಳ ಮೂಲಕ ವ್ಯಕ್ತಿ ಮತ್ತು ಸಮಾಜದ ಪರಿಶೀಲನೆಯನ್ನು ಮಾಡಿರುವುದನ್ನು ಆತ್ಮ ಕಥಾ ಚರಿತ್ರೆಯ ಪಠ್ಯದೊಳಗೆ ಗುರುತಿಸಬಹುದಾಗಿದೆ.

ಸಾಹಿತ್ಯ, ಕಲೆ, ಸಂಸ್ಕೃತಿ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಅನೇಕರು ತಮ್ಮ ಬದುಕಿನ ಪಟ್ಟಪಾಡುಗಳನ್ನು ಹುಟ್ಟು ಹಾಡುಗಳನ್ನಾಗಿ ಹೇಳುವ ಪ್ರಯತ್ನವನ್ನು ಆತ್ಮಕಥೆ, ಆತ್ಮಚರಿತ್ರೆ ಎನ್ನುವ ಸಾಹಿತ್ಯ ಪ್ರಕಾರದಲ್ಲಿ ಯಶಸ್ವಿಯಾಗಿ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತನ್ನದೇ ಸ್ಥಾನಮಾನವನ್ನು ಪಡೆದಿರುವ ಸೃಜನಶೀಲ ಲೇಖಕರು, ಚಿಂತಕರು ತಮ್ಮ ಸಮಾಜದ ಅಂತರಿಕ ವಿಮರ್ಶಕರು ಎಂದು ಹೆಸರು ಪಡೆದಿರುವ ಡಾ. ಯು. ಆರ್. ಅನಂತಮೂರ್ತಿ ಅವರು ತಮ್ಮ ಇಳಿಗಾಲದಲ್ಲಿ ತಮ್ಮ ಬದುಕಿನ ನೆನಪಿನ ಬುತ್ತಿಯನ್ನು ದಾಖಲಿಸುವ ಕೆಲಸವನ್ನು ಮಾಡಿದ್ದಾರೆ. ಅನಂತಮೂರ್ತಿ ಅವರ ಮೌಖಿಕ ಮತ್ತು ಲಿಖಿತ ದಾಖಲೆಗೆ ಸಾಕ್ಷಿಯಾಗಿ ಶ್ರೀ ಜ. ನಾ. ತೇಜಶ್ರೀ ಅವರು ಅನಂತಮೂರ್ತಿ ಅವರ ಮಹತ್ವಾಕಾಂಕ್ಷೆ ಆತ್ಮ ಕಥನವಾದ 'ಸುರಗಿ'ಯನ್ನು ನಿರೂಪಣೆ ಮತ್ತು ಸಂಯೋಜನೆಯನ್ನು ಮಾಡಿದ್ದಾರೆ.

ಯು. ಆರ್. ಅನಂತಮೂರ್ತಿ ಅವರೇ ಕೃತಿಯ 'ನನ್ನ ಮಾತು' ಗಳಲ್ಲಿ ಹೇಳುವ ಹಾಗೆ 'ನಾನು ಬರೆದೆ ಅನ್ನುವುದಕ್ಕಿಂತ ಈ ಆತ್ಮ ಕಥೆ ತೇಜಶ್ರೀ ಮುಖೇನ ಬರೆಸಿಕೊಂಡಿತು ಎನ್ನುವುದು ಹೆಚ್ಚು ಸತ್ಯ' ಎಂದು ಹೇಳುವುದರ ಮೂಲಕ ಜ. ನಾ. ತೇಜಶ್ರೀ ಅವರ ಮೇಲಿನ ಅಪಾರವಾದ ನಂಬಿಕೆ ಹಾಗೂ ವಿಶ್ವಾಸಗಳು ಮೇಲಿನ ಸಾಲುಗಳಲ್ಲಿ ವ್ಯಕ್ತವಾಗುತ್ತದೆ.

ಯು.ಆರ್.ಅನಂತಮೂರ್ತಿ ಅವರ ಪ್ರಮುಖ ತ್ರಿವಳಿ ಕಾದಂಬರಿಗಳೆಂದು ಹೆಸರನ್ನು ಪಡೆದಿರುವ ಸಂಸ್ಕಾರ – ಅವಸ್ಥೆ– ಭಾರತೀಪುರ ಕೃತಿಗಳನ್ನು ಬರೆಯುವಾಗ ಈ ಕಾದಂಬರಿಗಳು ನನ್ನಿಂದ ಒತ್ತಡ ಪೂರ್ವಕವಾಗಿ ಬರೆಸಿಕೊಂಡಿತು ಎನ್ನುವ ಮಾತುಗಳನ್ನು ತೌಲನಿಕವಾಗಿ ಪರಿಶೀಲಿಸಬಹುದು. ಯು.ಆರ್. ಅನಂತಮೂರ್ತಿ ಅವರು ಹುಟ್ಟೂರು ಪರಿಸರವಾದ ಸಿಹಿಮೊಗ್ಗೆ,

ಶಿವನಮುಖ, ಶಿವಮೊಗ್ಗ ಎಂದು ನಾನಾರ್ಥಗಳಿಂದ ಕರೆಸಿಕೊಳ್ಳುವ ಊರನ್ನು ಅದೇ ಪ್ರದೇಶದಲ್ಲಿ ಹುಟ್ಟಿ ಅಂತರರಾಷ್ಟ್ರೀಯ ಮಟ್ಟದ ಖ್ಯಾತಿ–ವಿಖ್ಯಾತಿಗಳನ್ನು ಪಡೆದಿರುವ ಕುವೆಂಪು, ತೇಜಸ್ವಿ, ಡಾ. ಜಿ.ಎಸ್.ಶಿವರುದ್ರಪ್ಪ, ಪಿ. ಲಂಕೇಶ್ ಅವರಿಗಿಂತ ವಿಭಿನ್ನವಾಗಿ ಮಲೆನಾಡಿನ ಕಥನವನ್ನು ತಮ್ಮ ಸಾಹಿತ್ಯ–ಕಥನದಲ್ಲಿ ಪ್ರಕಟಿಸಿ ಅಂತರರಾಷ್ಟ್ರೀಯ ಮಟ್ಟದ ಚಿಂತಕರಾಗಿ ಬೆಳೆಯುತ್ತಾರೆ. ನವ್ಯ ಕಾಲದ ಉಚ್ಛ್ರಾಯ ಕಾಲಘಟ್ಟದಲ್ಲಿ, ಮೈಸೂರಿನ ಸಾಂಸ್ಕೃತಿಕ ಪರಿಸರಗಳು ಪ್ರಬುದ್ಧ ಇಂಗ್ಲೀಷ್ ಪ್ರಾಧ್ಯಾಪಕರಾಗಿ, ಆಕರ್ಷಕವಾದ ಹರಳು–ಹುರಿದಂತೆ ಕನ್ನಡ ಮತ್ತು ಇಂಗ್ಲೀಷ್ ಹಾಗೂ ಜಾಗತಿಕ ಸಾಹಿತ್ಯವನ್ನು ಸಮನ್ವಯಗೊಳಿಸಿ ಮಾತನಾಡುವ ಕಲೆಗಾರಿಕೆ ಯು. ಆರ್. ಅನಂತಮೂರ್ತಿ ಅವರಿಗೆ ಸಿದ್ಧಿಸಿತ್ತು.

ನವ್ಯ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯದಲ್ಲಿ ಭದ್ರವಾದ ಬೇರುಗಳನ್ನು ಬಿಟ್ಟು ಪೋಷಿಸಿದ ನವ್ಯ ಕವಿ ಡಾ. ಗೋಪಾಲಕೃಷ್ಣ ಅಡಿಗರ ಪ್ರಿಯಶಿಷ್ಯರಾಗಿ ತಮ್ಮ ಇಂಗ್ಲೀಷ್ ಅಧ್ಯಾಪನ, ಉದಯೋನ್ಮುಖ ಕವಿಗಳಾಗಿ, ಬರಹಗಾರರಾಗಿ ಮುಂದುವರೆಸಿಕೊಂಡು ಬಂದು ನಂತರದಲ್ಲಿ ಗುರುಮೀರಿಸಿದ ಶಿಷ್ಯರಾಗಿ ಬೆಳೆದದ್ದು, ಭಾರತೀಯ ಸಾಹಿತ್ಯದ ಇತಿಹಾಸದಲ್ಲಿ ದಾಖಲಾಗಿರುವ ಪ್ರಮುಖವಾದ ಅಂಶವಾಗಿದೆ.

ಒಬ್ಬ ಸೃಜನಶೀಲ ಲೇಖಕನಿಗೆ ತನ್ನ ಪರಿಸರದ ಸಾರಸತ್ವವನ್ನು ಹೀರಿ, ಅದರ ಮಣ್ಣಿನ ವಾಸನೆಯನ್ನು ಜಗತ್ತಿನ ಇತರ ಭಾಗಕ್ಕೆ ಪಸರಿಸುವ ಕೆಲಸವನ್ನು ತನ್ನ ಬದುಕು–ಬರಹಗಳ ಮೂಲಕ ನಿರಂತರವಾಗಿ ಮಾಡುತ್ತಿರುತ್ತಾನೆ. ಅದಕ್ಕೊಂದು ಜೀವಂತ ಸಾಕ್ಷಿಯಾಗಿ ಯು. ಆರ್. ಅನಂತಮೂರ್ತಿ ಅವರ ಸುರಗಿ ಆತ್ಮಕಥನವನ್ನು ಎಳೆ–ಎಳೆಯಾಗಿ ಪರಿಶೀಲಿಸಬಹುದಾಗಿದೆ.

'ಸುರಗಿ' ಆತ್ಮ ಕಥನ ಕೃತಿ ಒಟ್ಟಾರೆಯಾಗಿ ನಾಲ್ಕು ನೂರ ಮೂವತ್ತಾರು ಪುಟಗಳನ್ನು ಹೊಂದಿದ್ದು. ಅದರಲ್ಲಿ ಮುಖ್ಯವಾಗಿ ಹತ್ತು ಅಧ್ಯಾಯಗಳ ಪ್ರಸ್ತಾಪವಿರುವುದನ್ನು ಗಮನಿಸಬಹುದಾಗಿದೆ. ಪ್ರಥಮ ಮುದ್ರಣ 2012 ಮೂರನೇ ಮುದ್ರಣ 2021 ರಂದು ದೊಂದಿಗೆ 2023ರ ಈ ಹೊತ್ತಿಗೆ ಹನ್ನೊಂದು ವರ್ಷಗಳನ್ನು ಯಶಸ್ವಿಯಾಗಿ ಪೂರೈಸುಇರುವ ಈ ಕೃತಿ ಇಂದಿಗೂ ಹಲವಾರು ಪ್ರಶ್ನೆ, ವಾದ– ಸಂವಾದಗಳನ್ನು ಎತ್ತುತ್ತಾ ಲೇಖಕರ ಮರಣದ ನಂತರವೂ ಈ ಕೃತಿ ಜೀವಂತವಾಗಿದೆ.

ಡಾ. ನಟರಾಜ್ ಹುಳಿಯಾರ್ ಅವರ ಸಾಂಸ್ಕೃತಿಕ ಬರಹಗಳಿಂದ ಕೂಡಿದ 'ಗಾಳಿ–ಬೆಳಕು' ಪುಸ್ತಕದ ಒಂದು ಅಧ್ಯಾಯದಲ್ಲಿ ಒಂದು ಮಾತಿದೆ. 'ಲೇಖಕರು ಸತ್ತ ಮೇಲೆ ಏನಾಗುತ್ತಾರೆ ಎನ್ನುವುದಕ್ಕೆ ಪ್ರತಿಯಾಗಿ ಪುಸ್ತಕಗಳಾಗುತ್ತಾರೆ' ಎನ್ನುವ ಪ್ರತಿಮಾತು ಬರುತ್ತದೆ. ಅದೇ ರೀತಿ ಡಾ. ಯು. ಆರ್. ಅನಂತಮೂರ್ತಿ ಅವರ ಮರಣದ ನಂತರ 'ಸುರಗಿ' ಅವರ ಆತ್ಮ ಕಥನ 'ಜೀವಂತ ಕೃತಿ' ಯಾಗಿ ನಮ್ಮ ಕಣ್ಣುಂದೆ ಇದೆ. ಒಟ್ಟಾರೆಯಾಗಿ ಹತ್ತು ಅಧ್ಯಾಯಗಳನ್ನು ಹೊಂದಿರುವ ಈ ಕೃತಿ

* ಬಾಲ್ಯ, * ಓದಿನ ದಿನಗಳು, * ಸಂಸಾರ * ಅಧ್ಯಾಪಕರಾಗಿ * ತುರ್ತು ಪರಿಸ್ಥಿತಿ * ಸೃಜನಶೀಲತೆಯ ಉಬ್ಬು ತಗ್ಗುಗಳು * ಕೇರಳದಲ್ಲಿ * ಎನ್. ಬಿ. ಟಿ. ಸಾಹಿತ್ಯ ಅಕಾಡೆಮಿ * ಸಂಕಟಗಳು– ವಿವಾದಗಳು * ಹೀಗೇ ಕೆಲವು ಮಾತುಗಳು.... ಎನ್ನುವ ವಿಶಾಲವಾದ ಹರವನ್ನು ಈ ಕೃತಿಯು ಹೊಂದಿದೆ.

ಇಂದಿನ ಸಾಹಿತ್ಯ, ಸಂಸ್ಕೃತಿ ವಲಯದಲ್ಲಿ ಕೇಳಿ ಬರುತ್ತಿರುವ ದಿನನಿತ್ಯದ ಮಾತುಗಳು ಈ ಸಂದರ್ಭದಲ್ಲಿ ಡಾ. ಯು. ಆರ್. ಅನಂತಮೂರ್ತಿ ಅವರು ಇದಕ್ಕೆ ಹೇಗೆ ಪ್ರತಿಕ್ರಿಯೆಯನ್ನು ನೀಡುತ್ತಿದ್ದರು ಎನ್ನುವ ಮಾತುಗಳೇ ಅವರ ದೈಹಿಕ ಗೈರು

ಹಾಜರಿಯಲ್ಲಿ ಅವರ ಬೌದ್ಧಿಕತೆಯ ಹಾಜರಾತಿ ಅವರ ಹಲವು ಸೃಜನಶೀಲ ಪಠ್ಯಗಳು, ಬರಹಗಳು ಮತ್ತು ಭಾಷಣಗಳಲ್ಲಿ ಕಾಣಸಿಗುತ್ತದೆ.

ಯು. ಆರ್. ಅನಂತಮೂರ್ತಿ ಅವರ ಪ್ರಸಿದ್ಧ. ಜನೋಪಯೋಗಿ ಭಾಷಣದಲ್ಲಿ ಹಾಗೂ ದಾಖಲಾಗಿರುವ ಲೇಖನದಲ್ಲಿ ಭಾರತೀಯರಲ್ಲಿ ಮೂರು ಬಗೆಯ ಹಸಿವುಗಳಿವೆ ಎಂದು ಪದೇ ಪದೇ ನೆನಪಿಸುತ್ತಾರೆ.

ಮೊದಲನೇಯದು : ಸಮಾನತೆಯ ಹಸಿವು

ಎರಡನೇಯದು : ಆಧುನಿಕತೆಯ ಹಸಿವು

ಮೂರನೇಯದು : ಅಧ್ಯಾತ್ಮಿಕತೆಯ ಹಸಿವು ಎನ್ನುವ ಮೂಲಕವೇ 'ಹಸಿವು' ಅನ್ನು ರೂಪಕಾತ್ಮಕವಾಗಿ ಗ್ರಹಿಸುವ ಕೆಲಸವನ್ನು ಮಾಡುತ್ತಾರೆ. ತಾನು ಉಳಿಯುವ, ಬೆಳೆಯುವ, ವಿಕಾಸ ಹೊಂದುವ ಹಂತಗಳನ್ನು ಸಾಹಿತ್ಯದ ಅನೇಕ ಪಠ್ಯಗಳ ಮುಖಾ ಮುಖಿ, ಅನುಸಂಧಾನದ ಮೂಲಕ ತಮಗೆ ತಿಳಿ ಹೇಳುವ ಪ್ರಯತ್ನ ಮಾಡುತ್ತಾರೆ.

ಡಾ. ಕೆ. ಶಿವರಾಮಕಾರಂತರ 'ಚೋಮದುಡಿ' ಕಾದಂಬರಿ ಕಾಲದ ಪರೀಕ್ಷೆಯಲ್ಲಿ ಗೆದ್ದ ಕೃತಿ. ಬಾಲ್ಯದಲ್ಲಿ ಯು. ಆರ್. ಅನಂತಮೂರ್ತಿ ಅವರು ಚೋಮನ ದುಡಿ ಕಾದಂಬರಿ ಓದಿದಾಗ ಎಳೆಮನಸ್ಸಿನ ಮೇಲೆ ಗಾಢವಾದ ಪರಿಣಾಮ ಉಂಟು ಮಾಡಿದರ ಬಗ್ಗೆ ಅವರೇ ಹೇಳುವ ಮಾತುಗಳಿವು. 1. ಒಂದು ವಿಚಿತ್ರ ಅನುಭವ : ಆಗ ನಾನು ದೂರ್ವಾಸಪುರದಲ್ಲಿ ಶಾಲೆಗೆ ಹೋಗುತ್ತಿದ್ದ ಹುಡುಗ. 'ಚೋಮನದುಡಿ' ಓದುತ್ತಿದ್ದೆ. ನಮ್ಮ ಮನೆಗೆ ಚೌಡ ಅನ್ನುವವನು ಕೊಟ್ಟಿಗೆ ಕೆಲಸಕ್ಕೆ ಬರುತ್ತಿದ್ದ. ನಾನು ಆ ಕಾದಂಬರಿಯನ್ನು ಆಗಷ್ಟೆ ಓದಿ ಮುಗಿಸಿದ್ದರಿಂದ ಚೌಡನನ್ನು ಅವತ್ತು ನೋಡಿದ ಕೂಡಲೇ ನನಗನ್ನಿಸಿದ್ದು ಈ ಚೌಡನಿಗೊಂದು ಒಳಜೀವನ ಇದೆ ಅಂತ. ಅದು ನನ್ನಲ್ಲಿ ಹೊಸ ಪ್ರಜ್ಞೆ ಹುಟ್ಟಿದ ಹೊತ್ತು. 'ಚೋಮನದುಡಿ'ಯ ಚೋಮ ದುಡಿ ಬಾರಿಸುವುದು, ಬಾಯಿಯಲ್ಲಿ ಹೇಳುವುದಕ್ಕಾಗದ್ದನ್ನು ಅದರ ಮೂಲಕ ಬೇರೆ ಬೇರೆ ದನಿಯಲ್ಲಿ ಹೊರಡಿಸುವುದು ಹಾಗೇ ಈ ಚೌಡನಿಗೂ ಕೂಡ ಮನಸ್ಸಿನಲ್ಲಿ ಏನೇನೋ ಅವನದೇ ಭಾವನೆಗಳು ಇರಬಹುದು ಅನ್ನಿಸಿದ ಕೂಡಲೇ ನನಗೆ ಅವನು ಅಸ್ಪೃಶ್ಯ ಅನ್ನುವ ಭಾವನೆ ಪೂರ್ಣ ಕಳೆದು ಹೋಯಿತು"1

ಒಂದು ಸೃಜನಶೀಲ ಕೃತಿ ಮುಗ್ಧ ಮನಸ್ಸಿನ ಮೇಲೆ ಪ್ರಭಾವ ಬೀರಿದಾಗ ಯು. ಆರ್. ಅನಂತಮೂರ್ತಿ ಅವರು ತಮ್ಮ ಸಮುದಾಯದ ಅಂತರಿಕ ವಿಮರ್ಶಕರಾಗಿ ಹೊರಹೊಮ್ಮಿದರು. ಅವರ ಸಾರ್ವಕಾಲಿಕ ಶ್ರೇಷ್ಠ ಕೃತಿ ಎಂದು ಹೆಸರು ಪಡೆದಿರುವ ಸಂಸ್ಕಾರ ಕಾದಂಬರಿಯ ಹಿಂದೆ ಚೋಮನದುಡಿಯ ನೆರಳಿದೆ ಎನ್ನುವುದನ್ನು ಮರೆಯಬಾರದು.

ಯು. ಆರ್. ಅನಂತಮೂರ್ತಿ ಅವರು ಶಿವಮೊಗ್ಗ ಎಂಬ ಸಾಂಸ್ಕೃತಿಕ ಪರಿಸರದಲ್ಲಿ ಹುಟ್ಟಿ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಪ್ರಬುದ್ಧ ಚಿಂತಕರಾಗಿ ಬೆಳೆದವರು ಅವರು ಅನೇಕ ಬಾರಿ ರಾಜ್ಯ ಸರ್ಕಾರದ, ಕೇಂದ್ರ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಇದ್ದವರು ಅವರಿಗೆ ಓಡಾಟ–ಹುಡುಕಾಟ–ಒಡನಾಟ ಹೊಸದೇನಲ್ಲ ಅವರೇ ಹೇಳುವಂತೆ "ನನ್ನ ಪಾದದಲ್ಲಿ ಚಕ್ರವಿದೆ. ನಿನ್ನ ಅಪ್ಪನ ಪಾದದಲ್ಲೂ ಒಂದು ಚಕ್ರವಿದೆ ಅದು ನಿಂತಲ್ಲಿ ನಿಲ್ಲುವುದಕ್ಕೆ ಬಿಡುವುದಿಲ್ಲ. ನಮ್ಮನ್ನು ಓಡಾಡಿಸುತ್ತಲೇ ಇರುತ್ತದೆ. ಈ ಚಕ್ರ ನನ್ನ

ಪಾದದಲ್ಲೂ ಇದೆ ಎಂಬುದು ಅಜ್ಜನ ಭಾವನೆಯಾಗಿತ್ತು. 'ನೀನೂ ಬಹಳ ಓಡಾಡುತ್ತೀಯಾ', ಎನ್ನುತ್ತಿದ್ದರು. ಈ ದೃಷ್ಟಿಯಲ್ಲಿ ನಾವೆಲ್ಲಾ ಚಕ್ರದಾರಿಗಳು– ಕೈಯಲ್ಲಿಲ್ಲ ಕಾಲಿನಲ್ಲಿ!

ಭಾರತ ಸಾಂಸ್ಕೃತಿಕ ಪರಿಸರದಲ್ಲಿ ಸಮಾಜವಾದಿ ನಾಯಕರೆಂದು ಗುರುತಿಸಿಕೊಂಡಿದ ಡಾ. ರಾಮಮನೋಹರ ಲೋಹಿಯಾ ಅವರೊಡನೆ ನಡೆಸಿದ ಚರ್ಚೆಯು, ಸಮಾಜದಲ್ಲಿ ಇರುವ ಗಂಡು–ಹೆಣ್ಣುಗಳ ಸಂಬಂಧಗಳನ್ನು ಕುರಿತಂತೆ, ಅನಂತಮೂರ್ತಿ ಅವರು ಲೋಹಿಯಾ ಅವರಿಗೆ ಬಸವ, ಅಲ್ಲಮ್ಮ ಮತ್ತು ಅಕ್ಕಮಹಾದೇವಿ ಅವರನ್ನು ವಿವರಿಸುವುದಕ್ಕಿಂತ ಮುಂಚೆಯೇ "5ಹೆಣ್ಣಿನ ಬಿಡುಗಡೆ ಬಗ್ಗೆ ಆಳವಾಗಿ ಚಿಂತಿಸುತ್ತಿದ್ದ ಲೋಹಿಯಾ ಅಕ್ಕನಿಂದ ಆಕರ್ಷಿತರಾದರು. ಹೆಣ್ಣನ್ನು ಹುಚ್ಚು ಹಿಡಿಯುವಷ್ಟು ಪರಮ ಪ್ರೀತಿಯಲ್ಲಿ ಕಾಣುವ ಗಂಡಿನ ದ್ವಂದ್ವದ ಬಗ್ಗೆಯೂ ಲೋಹಿಯಾ ಹೇಳಿದ್ದು ನನ್ನ ಮನಸ್ಸಲ್ಲಿ ಇತ್ತು. ತನ್ನ ಹೆಣ್ಣು ಚೆಲುಮೆಯೂ ಧೀಮಂತಲೂ ಆಗಿರಬೇಕೆಂದು ಬಯಸುವ ಗಂಡು ಅವಳು ಸಂಪೂರ್ಣ ತನ್ನ ವಶದಲ್ಲಿರಬೇಕೆಂದು ಕೂಡ ಆಸೆ ಪಡುತ್ತಾನೆ. ಈ ಎರಡೂ ಒಟ್ಟಾಗಿ ದಕ್ಕುವುದು ಅಸಾಧ್ಯ ಗಂಡು–ಹೆಣ್ಣಿನ ಸಂಬಂಧದಲ್ಲಿ ಅಡಗಿರುವ ಸಂಕಟ ಇದು– ಎಲ್ಲ ಕಾಲದಲ್ಲೂ"5 ಎನ್ನುವ ಮಾತುಗಳು ಯು. ಆರ್. ಅನಂತಮೂರ್ತಿ ಅವರಿಗೆ ಬಹುವಾಗಿ ಕಾಡುತ್ತದೆ.

ಕೆ. ವಿ. ಸುಬ್ಬಣ್ಣ ಅವರು ಲೋಹಿಯಾ ಅವರ ವಿಚಾರಧಾರೆಗಳನ್ನು ಕನ್ನಡ ಸಾಂಸ್ಕೃತಿಕ ಪರಿಸರಕ್ಕೆ 'ರಾಜಕೀಯದ ಮಧ್ಯೆ ಬಿಡುವು' ಎನ್ನುವ ಅನುವಾದಿತ ಕೃತಿಯನ್ನು ನೀಡಿದ್ದಾರೆ. ಅನಂತಮೂರ್ತಿ ಅವರ ಗಾಢವಾದ ಸಮಾಜವಾದಿ ಚಿಂತನೆಗೆ ಲೋಹಿಯಾ ಅವರ ಒಡನಾಟವು ಸಹ ಕಾರಣವಾಗಿದೆ. ಯು. ಆರ್. ಅನಂತಮೂರ್ತಿ ಅವರು ಹೇಳುವಂತೆ ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾಗಿ ಬರೆದ ಅತ್ಯುತ್ತಮ ಸಂಗ್ರಹರೂಪದ ಕಲಾಕೃತಿ 'ಅಸ್ಪೃಶ್ಯ' ಕಾದಂಬರಿಯನ್ನು ಬರೆದ ಮುಲ್ಕ್‌ರಾಜ್ ಆನಂದ್ ಅವರ ಬಗ್ಗೆ ಅಪರೂಪದ ಮಾಹಿತಿಗಳನ್ನು ತಮ್ಮ ಆತ್ಮ ಕಥನದಲ್ಲಿ ಹೇಳುತ್ತಾರೆ ಹಾಗೆಯೇ ಕಮಲಾದಾಸಳ ಬಗ್ಗೆ ಅವರು ಹೇಳಿರುವ ಮಾತುಗಳು ಸಂಪ್ರದಾಯ ಬದ್ಧ ಸಮಾಜದಿಂದ ಬಂಡಾಯವೆದ್ದು ತನ್ನ ಅಸ್ಥಿತ್ವವನ್ನು ಪ್ರತಿಷ್ಠಾಪಿಸುವ ಹೆಣ್ಣಾಗಿ ಕಾಣುತ್ತಾಳೆ ಎಂದು ಸವಿವರವಾಗಿ ವಿವರಿಸುತ್ತಾರೆ.

2"ಮುಲ್ಕ್‌ರಾಜ್ ಆನಂದ್ ಚಿರಯುವಕ ನೆಹರೂ ರೋಮ್ಯಾಂಟಿಕ್ ಯುಗದ ಚಿರಯುವಕ. ಹೃದಯವಂತ ಎಲ್ಲರೊಡನೆ ಸಹಜ ಪ್ರೀತಿಯಲ್ಲಿ ಬೆರೆಯುವಂತ ನನ್ನ ಕೃತಿಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿ ಪ್ರಕಟಿಸುವಂತೆ ಪ್ರಕಾಶಕನೊಬ್ಬನಿಗೆ ಹೇಳಿ, ನನ್ನನ್ನು ಅವನಿಗೆ ಪರಿಚಯಿಸಿದ ಮುಲ್ಕ್ ರಾಜ್ ಆನಂದರನ್ನು ಕೊಂಚ ಹಾಸ್ಯದಿಂದ ನೋಡದೇ ಗೌರವಿಸುವಂತಿಲ್ಲ. ವಸಾಹತು ಶಾಹಿಯನ್ನು ಐರೋಪ್ಯ ದೃಷ್ಟಿಯ ಮಾರ್ಕ್ಸ್ ವಾದಿಯೊಬ್ಬ ಗೆಲ್ಲುವ ಕ್ರಮದ ಪ್ರತೀಕವಾಗಿ ಮುಲ್ಕ್‌ರಾಜ್ ಆನಂದ್ ಇದ್ದಾರೆ. ಈಗ ಆತ ಇತಿಹಾಸ ನಮ್ಮ ನಿಮ್ಮ ಹಿಂದಿನ ಚರಿತ್ರೆ. ಒಮ್ಮೆ ಪ್ರತಿಭಾವಂತನಾಗಿದ್ದು ನಂತರ ಮೂಲೆ ಸೇರಿದ ಇಂಗ್ಲಿಷ್ ವಿಮರ್ಶಕ ಎಡ್ಜೆಲ್ ರಿಕ್‌ವರ್ಡ್‌ಗೆ ಇಂಗ್ಲೆಂಡಿನ ಮುವತ್ತರ ದಶಕದ ಪ್ರಗತಿಶೀಲ ಅಂದೋಲನದ ಏಕಮಾತ್ರ ಫಲ– ಆನಂದ್"2 ಎನ್ನುತ್ತಾರೆ.

ಹಾಗೆಯೇ [3]“ಕಮಲಾದಾಸಳ ಬಗ್ಗೆ ಬರೆಯಬೇಕು. ಈಕೆ ಭಾರತದಲ್ಲಿ ಹೊಸಮಾತನ್ನು ಆಡಿದ ಹೆಣ್ಣು. ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದು ಅದನ್ನು ಧಿಕ್ಕರಿಸಿ ಮೀಡಿಯಾಗಳಿಗೆ ಸುದ್ದಿಯಾದ ಹೆಣ್ಣು”[3] ಹೀಗೆ ಅನಂತಮೂರ್ತಿ ಅವರು ತಮ್ಮ ಸಮಕಾಲೀನ ಹಿರಿಯ–ಕಿರಿಯ ಲೇಖಕ–ಲೇಖಕಿಯ ಬಗ್ಗೆ ಪೂರ್ವ ಗ್ರಹಪೀಡಿತವಲ್ಲದ ಮಾತುಗಳನ್ನು ಗಮನಿಸಬಹುದು.

ಡಾ. ಯು.ಆರ್. ಅನಂತಮೂರ್ತಿ ಬದುಕು– ಬರಹಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಕಥನವಾಗಿ ‘ಸುರಗಿ’ ಕೃತಿ ಮೂಡಿ ಬಂದಿದೆ. ಬದುಕಿನಲ್ಲಿ ಬಂದ ಅನೇಕ ಎಡರು–ತೊಡರುಗಳನ್ನು ಸಮರ್ಥವಾಗಿ ನಿಭಾಯಿಸುವ ಕಲೆಗಾರಿಕೆಯನ್ನು ಯು. ಆರ್. ಅನಂತಮೂರ್ತಿ ಅವರು ಸಿದ್ಧಿಸಿಕೊಂಡಿದರು ಎಂದು ತಿಳಿಯಬಹುದು. ಅಪಾರವಾದ ತಲಸ್ಪರ್ಶಿಯಾದ ಓದುಗಳು, ಕನ್ನಡ ಮತ್ತು ಇಂಗ್ಲೀಷ್ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡ ಪ್ರತಿಫಲವಾಗಿ ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತರ ಸಾಲಿನಲ್ಲಿ ಸೇರಿದರು. ತಮ್ಮ ಆಕರ್ಷಕವಾದ ಮಾತುಗಾರಿಕೆ ಜನಪ್ರಿಯವಾದ ವಿಷಯಮಂಡನೆ ಕ್ರಮದಿಂದ ಅವರ ಬಾಷಣಗಳನ್ನು ಮತ್ತೆ–ಮತ್ತೆ ಕೇಳಲು ಸಾಹಿತ್ಯ, ಸಂಸ್ಕೃತಿ ಆಸಕ್ತರು ಬರುತ್ತಿದ್ದರು. ಅನೇಕ ವಾದ– ವಿವಾದ–ಪ್ರತಿವಾದಗಳ ಮಧ್ಯೆದಲ್ಲಿಯೂ ಇಂದಿನ ಸಂದರ್ಭದಲ್ಲಿಯೂ ಡಾ. ಯು. ಆರ್. ಅನಂತಮೂರ್ತಿ ಅವರು ಪ್ರಸ್ತುತವಾಗುವುದು ಅವರ ಪ್ರಖರ ವೈಚಾರಿಕ ದೃಷ್ಟಿಕೋನದಿಂದ ಸಂಸ್ಕಾರ– ಬೆತ್ತಲೆ ಪೂಜೆಯಾಕೆ ಕೂಡದು– ಹಿಂದುತ್ವ ಅಥವಾ ಹಿಂದ್ ಸ್ವರಾಜ್? ಎನ್ನುವ ತ್ರಿವಳಿ ಕೃತಿಯನ್ನು

ವರ್ತಮಾನದಲ್ಲಿ ಇಂದು ಪರಿಶೀಲಿಸಿದಾಗ ಸಮಾಜದ ಬಗ್ಗೆ ಹೊಸ ನೈತಿಕತೆಯನ್ನು ಎಚ್ಚರಿಸುವ ಸಮಾಜ ವಿಜ್ಞಾನಿಯಾಗಿ ಕಾಣಿಸುತ್ತಾರೆ ಅನಂತಮೂರ್ತಿ ಅವರು. ಸ್ವಾತಂತ್ರ್ಯ ಪೂರ್ವದಲ್ಲಿ ಹುಟ್ಟಿ ಸ್ವಾತಂತ್ರ್ಯ ಭಾರತವನ್ನು ಕಣ್ಣಾರೆ ಕಂಡು ಎಂಬತ್ತೆರಡು ವರುಷಗಳ ಕಾಲ ಬಾಳಿ ಬದುಕಿದ ಅನಂತಮೂರ್ತಿ ಅವರು ಕನ್ನಡ ಸಾಹಿತ್ಯ ಪರಂಪರೆಗೆ ಮಾತ್ರವಲ್ಲದೇ ಭಾರತೀಯ ಸಾಹಿತ್ಯ ಪರಂಪರೆಗೆ ತಮ್ಮ ಪ್ರಖರ ಚಿಂತನೆಗಳ ಮೂಲಕ ಭಾರತೀಯ ಸಮಾಜಕ್ಕೆ ಮೌಲಿಕವಾದ ಕೊಡುಗೆಯನ್ನು ನೀಡಿದ್ದಾರೆ. ಒಬ್ಬ ಸೃಜನಶೀಲ ಲೇಖಕ ಯಾವಾಗಲೂ ತನ್ನ ಸುತ್ತ–ಮುತ್ತಲಿನ ಪರಿಸರದ ಬಗ್ಗೆ ಮುಕ್ತವಾಗಿ ನೋಡುವ ಆಲೋಚನಾ ಕ್ರಮವನ್ನು ಹೊಂದಿರುತ್ತಾನೆ ಅನಂತಮೂರ್ತಿ ಅವರು ಅನೇಕ ಪ್ರಗತಿಪರ ವಿಚಾರಗಳಲ್ಲಿ ಸಾಮಾಜಿಕ–ಆರ್ಥಿಕ–ರಾಜಕೀಯ ವಿದ್ಯಮಾನಗಳು ಮಿಳಿತವಾಗಿರುವುದನ್ನು ಗಮನಿಸಬಹುದು ಅನಂತಮೂರ್ತಿ ಅವರ ‘ಸುರಗಿ’ ಕೃತಿ ಅವರ ಮರಣದ ಹಿಂದಿನ ಎರಡು ವರ್ಷಗಳ ಹಿಂದೆ ಪ್ರಕಟವಾಗಿರುವ ಕೃತಿಯಾಗಿದೆ. ಇವರ ಆತ್ಮಕಥನವನ್ನು ಇಂದು ಮತ್ತೆ ಮರು ಓದಿಗೆ ಒಳ ಪಡಿಸಿದಾಗ ಅನೇಕ ಪ್ರಶ್ನೆಗಳು ನಮ್ಮನ್ನು ಸದಾ ಕಾಡುತ್ತವೆ. ಡಾ. ಯು. ಆರ್. ಅನಂತಮೂರ್ತಿ ಅವರ ಪ್ರಕಾರ ವೈಚಾರಿಕ ಚಿಂತನೆಯ ಧ್ವನಿಯನ್ನು ಸಮಾಜವು ಕಳೆದುಕೊಂಡಿದೆ. ಎಂದೆನಿಸುತ್ತದೆ ಆದರೆ ಅವರು ನೀಡಿರುವ ಸಾಂಸ್ಕೃತಿಕ ಬರಹಗಳನ್ನು ಮತ್ತೆ–ಮತ್ತೆ ಅಧ್ಯಯನ ಮಾಡಿದಾಗ ಅತ್ಯುತ್ತಮವಾದ ಸಮಾಜಕ್ಕೆ ಬೇಕಾದ ಉಪಕರಣಗಳು ಅವರ ಕೃತಿಯ ಅಂತರಾಳದಲ್ಲಿ ಅಡಗಿದೆ. ಅದನ್ನು ನಾವುಗಳು ಪೂರ್ವಗ್ರಹ ಪೀಡಿತರಾಗದೆ ಮುಕ್ತವಾಗಿ ಅವರ ಬರಹಗಳನ್ನು ಅಧ್ಯಯನ ಮಾಡಿದರೆ ನಿಜಕ್ಕೂ ನಮಗೊಂದು ದಾರ್ಶನಿಕತೆ ಸಿಗುತ್ತದೆ ಎಂದು ಹೇಳಲು ಅಡ್ಡಿಯಿಲ್ಲ. ಅದರ ಪ್ರಯತ್ನವಾಗಿ ಹಿರಿದಾದ ಅರ್ಥವನ್ನು ಕಿರಿಯದರಲ್ಲಿ ಹೇಳುವ ಹಾಗೆ ಜ.ನಾ. ತೇಜಶ್ರೀ ಅವರ ನಿರೂಪಣೆ ಮತ್ತು ಸಂಯೋಜನೆಯಿಂದ ಮೂಡಿ ಬಂದಿರುವ ಯು. ಆರ್. ಅನಂತಮೂರ್ತಿ ಅವರ ಆತ್ಮ ಕಥನ ‘ಸುರಗಿ’ ಈ ಹೊತ್ತಿನ ಕನ್ನಡ ಸಾಹಿತ್ಯದ ಪ್ರಮುಖವಾದ ಸಾಂಸ್ಕೃತಿಕ ಪಠ್ಯ.

**ಆಕರ ಪಠ್ಯ**

1. ಸುರಗಿ – ಯು. ಆರ್. ಅನಂತಮೂರ್ತಿ ಆತ್ಮಕಥನ – ಪ್ರಕಾಶಕರು : ಅಕ್ಷರ ಪ್ರಕಾಶನ ಹೆಗ್ಗೋಡು ಮೂರನೇ ಮುದ್ರಣ 2021

**ಅಡಿ ಟಿಪಣಿ**

1. ಸುರಗಿ ಪುಟ – 51

2. ಸುರಗಿ ಪುಟ– 218

3. ಸುರಗಿ ಪುಟ – 219

4. ಸುರಗಿ ಪುಟ – 172

**ಪರಾಮರ್ಶನ ಗ್ರಂಥಗಳು**

1. ಊರು ಕಂಡಂತೆ... ಅನಂತ ಮೂರ್ತಿ–ಸಂಪಾದಕರು– ಡಾ. ಪಿ. ಶಾಂತಾರಾಮಪ್ರಭು ಪ್ರಕಾಶನ, ಸೂರ್ಯನ ಕುದುರೆ – ತೀರ್ಥಹಳ್ಳಿ ಮೊದಲ ಮುದ್ರಣ 2016

2. ದಿಎಸೆನ್ಸಿಯಲ್ ಯು. ಆರ್. ಅನಂತಮೂರ್ತಿ– ಸಂಪಾದಕರು ಎನ್. ಮನು ಚಕ್ರವರ್ತಿ ಚಂದನ್ ಗೌಡ ಪ್ರಕಾಶಕರು ಅಲೆಫ್ ಬುಕ್ ಕಂಪನಿ ಮೊದಲ ಮುದ್ರಣ – 2023

3. ಸಂಸ್ಕಾರ – ಯು.ಆರ್. ಅನಂತಮೂರ್ತಿ ಮನೋಹರ ಗ್ರಂಥಮಾಲೆ ಧಾರವಾಡ 1965

4. ವಾಲ್ಮೀಕಿಯ ನೆವದಲ್ಲಿ (ಲೇಖನಗಳು) ಅಭಿನವ ಪ್ರಕಾಶನ ಬೆಂಗಳೂರು 2006

5. ಬೆತ್ತಲೆ ಪೂಜೆ ಯಾಕೆ ಕೂಡದು? (ಲೇಖನಗಳು) ಅಕ್ಷರ ಪ್ರಕಾಶನ ಹೆಗ್ಗೋಡು 1996

ಡಾ. ಪಿ. ನಂಜುಂಡ ಕನ್ನಡ ಸಹ ಪ್ರಾಧ್ಯಾಪಕರು

ಸರ್ಕಾರಿ ಕಲಾ ಕಾಲೇಜು ಬೆಂಗಳೂರು–560001

ಇ–ಮೇಲ್ 1981ಟಿಚಿಟಿರಿಣಾಠಿ@ರಟಚಿಟ.ಛಿಠಟ